ನಗರ ಡಿವೀರ್ಜ.

ನಗರ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜ್‌ರೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 64.

ಮೃತಪಟ್ಟ ಚಿನಿವಾರ ಪಾಪಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮೂಡ್ಲಗಿರಿ ವೆಂಕಟರಮಣಯ್ಯ, ಮೃತಪಟ್ಟ ಸದರೀ ಚಿನಿವಾರ ಪಾಪಯ್ಯನ ಮಗ. ಮೈಸೆರ್ ಕೇಪಗಿರಿಯಪ್ಪನಿಗೆ ಸೋದರಮಾವನು ಆಗಬೇಕೆಂಬ ಹಕ್ಕುದಾರೀ ಮೇಲೆ ಕೊಪ್ಪ ತಾಲ್ಲೂಕು ಶ್ರೀಂಗೇರಿ ಸ್ಥಳದ ಮೂಡ್ಲಗಿರಿ ವೆಂಕಟರಮಣಯ್ಯನು, ಸದರೀ ಶ್ರೀಂಗೇರಿ ವಾಸಸ್ಥನಾಗಿ ಮೃತಪಟ್ಟ ಚಿನಿವಾರ ಪಾಪಯ್ಯನ ಜೆಂದಗಿ ಬಗ್ಯಾಗಿ ಬರತಕ್ಕ 4,000 ರೂಪಾಯಿನ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ಜರಖಾನ್ತುದಾರನಾದ ಮೂಡ್ಲಗಿರಿ ವೆಂಕಟರಮಣಯ್ಯನ ಅರ್ಜೀಯನ್ನು 1884ನೇ ಇಸವಿ ಆಗಸ್ಟು ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿನಿವಾರ ಪಾಪಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿನಿಶಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಜುಲೈ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಕಡೂರು ಡಿಸ್ಟ್ರಿಕ್ಟ್ ಟ್ರೆಜರಿ ಆಫಿಸಿನಿಂದ.

ತಾರೀಖು 11ನೇ ಜುಲೈ 1884.

ಇದರಿಂದ ತಿಳಿಯಪಡಿಸುವದೇನಂದರೆ; ಕಾಂಪ್ಟ್ರೋಲರ ಸಾಹೇಬರವರ ಆಫಿಸಿನ ಸ್ಯ 1883ನೇ ಇಸವಿ ಅಕ್ಟೋಬರ್ 30ನೇ ಮುಕ್ತಂ 2256ನೇ ನಂಬರ್ ಡಾಕೆಪೆ ಮೇರಿಗೆ ತತ್ತರಿಸಲ್ಪಟ್ಟ 69 ಮಣ 15 ಪೌಂಡ್ 36 ತೊಲಾ ಯಿರುವ ಮೈಸೂರು ದುಡ್ಡುಗಳು ಮತ್ತು ಅರ್ಧದುಡ್ಡುಗಳು ಯಿವುಗಳ ಬಾಬತು ತಾಂಬ್ರವನ್ನ ಪಡಿಯುವ ಬಗ್ಯೆ ಬರುವ ಮೊಹರ್ ಮಾಡಲ್ಪಟ್ಟ ಲಖೋಟೆಯಲ್ಲಿ ಅಡಗಿರುವ ದರಖಾಸ್ತುಗಳನ್ನು ಕಡೂರು ಡಿಸ್ಟ್ರಿಕ್ಟ್ ಟ್ರೆಜರಿ ಆಫಿಸರವರು, 1884ನೇ ಇಸವಿ ಆಗಸ್ಟು 14ನೇ ಬ್ರಹಸ್ಪತಿವಾರದ ವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖಿನ ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರದು.

3. ಆ ದರಖಾಸ್ತು ಲಿಫಾಫೆ ಮೇಲೆ "ಕಡೂರು ಡಿಸ್ಟ್ರಿಕ್ಟ್ ಟ್ರೆಜರೀಯಲ್ಲಿ ಕತ್ತರಿಸಲ್ಪಟ್ಟ ಮೈಸೂರು ತಾಂಬ್ರದ ದುಡ್ಡುಗಳನ್ನ ಕ್ರಯಕ್ಕೆ ತೆಗದುಕೊಳ್ಳತಕ್ಕ ದರಖಾಸ್ತು" ಯಂತ ಬರಿಯಬೇಕು.

4. 50 ರೂಪಾಯಿಗಳು ನಗದಾಗಿ ಅಥವಾ ಕರೆನ್ಸಿ ನೋಟುಗಳ ಮೂಲಕ ಡಿಪಾಜಿಟ್‌ನಿನ್ಸಿ ಕಳುಹಿಸಲ್ಪಟ್ಟ ಹೊರ್ತು ದರಖಾಸ್ತುಗಳು ತೆಗದುಕೊಳ್ಳಲ್ಪಡೆಲಾರವು.

5. ದರಖಾಸ್ತುಗಳು ಚಿಕ್ಕಮಗಳೂರಲ್ಲಿ ಯಿರುವ ಕಡೂರು ಡಿಸ್ಟ್ರಿಕ್ಟ್ ಟ್ರೆಜರೀ ಆಫಿಸಿನಲ್ಲಿ ಹಾಜರಾಗಲಿಕ್ಕೆ ಯಿಷ್ಟವುಳ್ಳ ದರಖಾಸ್ತುದಾರರುಗಳ ರೂಬರೂ ಮೇಲ್ಕಂಡ ತಾರೀಖಿನ ಮಧ್ಯಾನ್ಹ 1 ಘೆಂಟೆಗೆ ಕಡೂರು ಡಿಸ್ಟ್ರಿಕ್ಟ್ ಟ್ರೆಜರಿ ಆಫಿಸರವರಿಂದ ಖುಲ್ಲಾ ಮಾಡಲ್ಪಡುವನ್ನು.

6. ದರೋಬಸ್ತು ದರಖಾಸ್ತುಗಳಲ್ಲಿಯೂ ಇಂಗ್ಲಿಷ್ ತೂಕ 25 ಪೌರ್ವಗೆ ವಂದು ಮಣದಂತೆ ಆಗತಕ್ಕ ತಾಂಬ್ರಕ್ಕೆ ಅವರಿಗೆ ಖಾಯಿಷ್ ಯಿರುವ ದರವು ಅಕ್ಷರದಿಂದಲೂ ಅಂಕೆಯಿಂದಲೂ ಸಾಫ್ ನಮೂದಿಸತಕ್ಕದ್ದು.

7. ಟ್ರೆಜರಿ ಆಫೀಸರವರು ಯಾವ ದರಖಾಸ್ತನ್ನಾಗಲಿ ಕಾರಣಗಳನ್ನ ಹೇಳದೆ ತಿರಸ್ಕರಿಸುವ ಸ್ವಾತಂತ್ರವನ್ನು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

8. ಮಂಜೂರಾದ ದರಖಾಸ್ತುದಾರನು ಡಿಪಾಜಿಟ್ ಮೊಬಲಗು ಕಿಪಾಯಿ ಬಾಕೀ ಸದರೀ ತಾಂಬ್ರಕ್ಕೆ ಅವನು ಮಂಜೂರಾದ ದರದಂತೆ ಕೊಡಬೇಕಾದ ಪೂರಾ ಮೊಬಲಗನ್ನ ದರಖಾಸ್ತು ಮಂಜೂರಾದ ಕೂಡ್ಲೇ ಕೊಡಲಿಕ್ಕೆ ತಪ್ಪಿದರೆ ಸದರೀ ಡಿಪಾಜಿಟ್ ಸರಕಾರಕ್ಕೆ ಸೇರಿಸಿಕೊಳ್ಳುವದಲ್ಲದೆ ಸದರೀ ತಾಂಬ್ರವನ್ನ ಪುನಹಾ ಹರಾಜು ಮಾಡಿಸಿ ಆ ಯರಡನೆ ಹರಾಜಿನಲ್ಲಿ ನಷ್ಟಬರುವ ಮೊಬಲಗನ್ನು ತಪ್ಪಿದ ದರಖಾಸ್ತುದಾರನು ಕೊಡುವದಕ್ಕೆ ಬದ್ಧನಾಗಿ ಯಿರುತ್ತಾನೆ.

ಕ. ನಾಗೇಶರಾವ್,
ಫಾರ್ ಡೆವ್ಯೂಟಿ ಕಮ್ಮಿಷನರ್
ಟ್ರೆಜರಿ ಡಿಪಾರ್ಟ್‌ಮೆಂಟ್.